
# ನವಿಲುಗನ್ನಡಿ




- ಸೆಪ್ಟೆಂಬರ್ ಸಂಚಿಕೆ ಭಾಷೆಯ ಮಹತ್ವ ಮತ್ತು ಅದರ ತಾಕತ್ತಿನ ಅನಾವರಣ ಮಾಡಿದೆ. ಭಾಷೆ, ಕೇವಲ ಆಡಲಿಕ್ಕಷ್ಟೇ ಅಲ್ಲ, ಅದು ಪರಸ್ಪರರನ್ನು ಹತ್ತಿರಕ್ಕೆ ತರುವುದರ ಜತೆ ಸಂಸ್ಕೃತಿ ಸಂಸ್ಕಾರಗಳ ವಿನಿಮಯದ ಕೊಂಡಿ ಎಂಬುದನ್ನು ಮನದಟ್ಟು ಮಾಡಿಕೊಟ್ಟಿದೆ. ಭಾಷೆ ಇದ್ದಲ್ಲಿ ಪ್ರೀತಿ ಮತ್ತು ಸಂವಹನಗಳ ಜತೆ 'ನಮ್ಮವರು' ಎಂಬ ಕಲ್ಪನೆಯನ್ನೂ ತನ್ನಿಂದ ತಾನೆ ಹುಟ್ಟಿಸುತ್ತದೆ. ಭಾಷೆ, ಆ ದೃಷ್ಟಿಯಲ್ಲಿ ಅತ್ಯಂತ ಶಕ್ತಿಯುತ ಅಸ್ತ್ರ. ಮಾತೇ ಮಾಣಿಕ್ಯ, ಭಾಷೆ ಬಲ್ಲವ ದೇಶ ಗೆಲ್ಲಬಲ್ಲ ಎಂಬುದೆಲ್ಲ ಭಾಷೆಯ ತಾಕತ್ತನ್ನೇ ಸೂಚಿಸುತ್ತದೆ. ಶಿಹಾಬುದ್ದೀನ್ ಪೊಯ್ತುಂಕಡವು ಹಾಗೂ ಜೆರ್ರಿ ಪಿಂಟೊ ಸಂದರ್ಶನಗಳು ಓದುಗರನ್ನು ಈ ಬಗೆಯ ಚಿಂತನೆಗೆ ಹಚ್ಚಿವೆ.

**ಶಂಕರನಾರಾಯಣ ಭಟ್, ಮಾಡಗೇರಿ**

- ‘ಎಲ್ಲಿ ಭಾಷೆಯ ಬಳಕೆ ಸರಿ ಇರೋದಿಲ್ವೋ ಅಲ್ಲಿ ಪ್ರೀತಿ ಮತ್ತು ಪರಸ್ಪರ ಅರ್ಥಮಾಡಿಕೊಳ್ಳುವಿಕೆಯೂ ಸಾಧ್ಯವಿಲ್ಲ’ ಎಂಬ ಮಲಯಾಳಂ ಸಾಹಿತಿ ಶಿಹಾಬುದ್ದೀನ್ ಪೊಯ್ತುಂಕಡವು ಅವರ ಮಾತುಗಳಲ್ಲಿ ಹೊಸ ಪರಿಭಾಷೆ ಸ್ಫುರಿಸುತ್ತದೆ. ‘ಕನ್ನಡದಲ್ಲಿ ನನ್ನದೊಂದು ಪುಸ್ತಕ ಪ್ರಕಟವಾಗಬೇಕು ಅನ್ನುವುದು ನನ್ನ ಕನಸಾಗಿತ್ತು’ ಎಂಬ ಶಿಹಾಬುದ್ದೀನ್ ಮಾತಿನಲ್ಲಿ ದ್ರಾವಿಡ ಸೋದರ ಭಾಷೆಗಳ ಬಗೆಗಿನ ಕಕ್ಕುಲತೆ ಎದ್ದುಕಾಣುತ್ತದೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಮುಖಪುಟ ಮನಾಕರ್ಷಕವಾಗಿದೆ. ‘ಮಯೂರ’ ಎನ್ನುವ ಹೆಸರಿಗೂ, ನಾಟ್ಯದ ವಿವಿಧ ಭಾವ ಭಂಗಿಗಳಿಗೂ ಅನ್ವರ್ಥವಾದ ಚಿತ್ರ. ಸುಂದರ ಕಥೆ, ಕವಿತೆಗಳ ಮಯೂರ ಗರಿಗೆದರಿ ಲಾಸ್ಯವಾಡಿದಂತಿದೆ.

**ಸುಮನಾ, ಬೆಂಗಳೂರು**

- ‘ಮಾತು ಮರೆತ ಮೌನ’ ಎಂ.ಕೆ. ಭಾಸ್ಕರ ರಾವ್ ಅವರ ಕಥೆ ಅಪರೂಪದ್ದು. ಇದೇ ಮೊದಲ ಬಾರಿ ಅವರ ಕಥೆ ಓದಿದ್ದು. ಕವಿತೆಗಳಂತೂ ಒಂದಕ್ಕಿಂತ ಒಂದು ವಿಭಿನ್ನ.

**ವಿಶ್ವೇಶ್ವರ ಗಾಯತ್ರಿ ಭಟ್ಟ, ಶಿರಸಿ**

- ಜಿ. ಕೃಷ್ಣಪ್ಪ (ಕುವೆಂಪು ಪದಕಾಶಿ)ಅವರ ಲೇಖನ ತುಂಬಾ ಚೆನ್ನಾಗಿದೆ. ಹೊಸ ಹೊಸ ಶಬ್ದಗಳನ್ನು ಹೇಗೆ ಅವರು ತಮ್ಮ ಕಲ್ಪನಾ ವಿಲಾಸದಿಂದ ಸೃಷ್ಟಿಸಿದರು ಎನ್ನುವುದು ಸೋಜಿಗ ಮತ್ತು ಹೆಮ್ಮೆ. ಶ್ರೀ ಸಾಮಾನ್ಯ, ಪಕ್ಷಿಕಾಶಿ, ಅಗ್ನಿ ಹಂಸ, ರಸಋಷಿ ಈ ಕೆಲವು ಪದಗಳನ್ನು ಮಾತ್ರ ಕೇಳಿದ್ದ ನಮಗೆ ಕುವೆಂಪು ಸೃಜಿಸಿದ ಅನೇಕ ಹೊಸ ಪದಗಳು, ಅವುಗಳ ಅರ್ಥವ್ಯಾಪ್ತಿ ವೇದ್ಯವಾಯಿತು. ಇಂಥ ಎಲ್ಲಾ ಪದಗಳ ಆವಿಷ್ಕಾರದ ಸಮಗ್ರ ಗದ್ಯ ಸಂಪುಟ ಓದಲು ಈ ಲೇಖನ ಪ್ರೇರೇಪಿಸಿತು.

**ಡಿ. ರಾಮನಮಲಿ, ಹರಪನಹಳ್ಳಿ**

**ತಲಕಾಡು ಶ್ರೀನಿಧಿ, ಬೆಂಗಳೂರು**

- ಒಂಟಿ ಸ್ಟೇಷನ್ (ಮಲಯಾಳಂ: ಶಿಹಾಬುದ್ದೀನ್ ಪೊಯ್ತುಂಕಡವು, ಕನ್ನಡಕ್ಕೆ: ಸುನೈಫ್) ಕಾಲ್ಪನಿಕ ಅನಿಸದೇ ನಮ್ಮ ಹಳ್ಳಿಯ ಸಮೀಪವೇ ಇರುವ